# ವಿಶಾಲ್‌ನ ಸಖ್ಯದಲ್ಲಿ...




■ ಹಿಂದಿ ಮೂಲ: ಶರದ್ ಸಿಂಗ್
■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಕಲೆ: ಎಚ್.ಎಸ್. ಮೋನಪ್ಪ

'ನಾನು ನಾದಿರಾ ಬಬ್ಬರ್ ಅವರ ನಿರ್ದೇಶನದಲ್ಲೂ ನಟಿಸಿದ್ದೇನೆ' ಎಂದು ವಿಶಾಲ್ ಹೇಳಿದ್ದ. ತಾನು ಗಿರೀಶ್ ಕಾರ್ನಾಡ್ ಮತ್ತು ನಾಸಿರುದ್ದೀನ್ ಶಾಹ ಅವರೊಂದಿಗೂ ಚಿಕ್ಕ ಪಾತ್ರದಲ್ಲಿ ವೇದಿಕೆಯನ್ನು ಹಂಚಿಕೊಂಡಿದ್ದೇನೆ ಎಂದೂ ಹೇಳಿದ್ದ.

'ನಿಮ್ಮ ಕವನಗಳಲ್ಲಿ ಮಹಿಳೆ ತನ್ನ ಸಮಗ್ರತೆಯೊಂದಿಗಿದ್ದಾಳೆ', ಅವನು ತುಂಬಾ ಒಳ್ಳೆಯ ಶಬ್ದಗಳಲ್ಲಿ ನನ್ನ ಕವನಗಳನ್ನು ಪ್ರಶಂಸಿಸಿದ್ದ. ಹೀಗೆ ಈ ಹಿಂದೆ ಬೇರಾರೂ ನನ್ನ ಬಗ್ಗೆ ಹೇಳಿರಲಿಲ್ಲ. ನಾನು ಪುಳಕಿತಳಾಗಿದ್ದೆ. ನನ್ನ ವೇತವನ್ನು ಡ್ರಾ ಮಾಡಲು ಬ್ಯಾಂಕಿಗೆ ಹೋದಾಗ ಅವನೊಂದಿಗೆ ನನ್ನ ಎರಡನೆಯ ಭೇಟಿಯಾಯಿತು. ಅವನು ಕೆಲಸ ಮಾಡುತ್ತಿದ್ದ ಅದೇ ಬ್ಯಾಂಕಿನ ನನ್ನ ಖಾತೆಗೆ ನನ್ನ ವೇತನ ಜಮಾ ಆಗುತ್ತಿತ್ತು. ನನ್ನನ್ನು ನೋಡಿ, ಅವನೇ ನನ್ನ ಬಳಿಗೆ ಎದ್ದು ಬಂದ.

'ಹೇಗಿದ್ದೀರ?'

'ಚೆನ್ನಾಗಿದ್ದೇನೆ' ಎಂದೆ.

'ನಿಮ್ಮ ಕವನಗಳ ರಚನೆ ಹೇಗೆ ನಡೀತಿದೆ?'

'ದಿನಾ ಎಲ್ಲಿ ಬರೆಯಲು ಸಾಧ್ಯ?'

'ನೀವು ರಾಜ್ಯ ಸರ್ಕಾರದ ನೌಕರರು, ನಿಮಗೆ ಸಮಯ ಸಿಗಬಹುದು; ಆದ್ರೆ ಬ್ಯಾಂಕ್ ನೌಕರರಾದ ನಮಗೆ ಸಮಯ ಸಿಗೋದು ತುಂಬಾ ಕಷ್ಟ' ಎಂದ ವಿಶಾಲ್.

'ನೀವು ಹೇಳೋದು ಸರಿ. ಬ್ಯಾಂಕಿನಲ್ಲಿ ಕೂಡಿ ಕಳೆದ ನಂತರ ದಣಿದುಬಿಡ್ತೀರೇನೋ!'

'ಹೌದು, ಇಲ್ಲಿ ದಣಿಯುತ್ತೇನೆ. ಆದ್ರೆ ಲಖನೌದಲ್ಲಿ ನಾಟಕ ರಿಹರ್ಸಲ್‌ಗೆ ಹೋಗಲು ಪರ್ಮಿಷನ್ ಸಿಗುತ್ತಿತ್ತು. ಅಲ್ಲಿ ನಾನು ಕಲಾಕಾರನಾಗಿ ಗುರುತಿಸುತ್ತಿದ್ದೆ. ಆದ್ರೆ ಇಲ್ಲಿ ಉಸಿರಾಡಲೂ ಆಗದಷ್ಟು ಜವಾಬ್ದಾರಿಗಳನ್ನು ಕೊಡಲಾಗಿದೆ. ಇಲ್ಲಿ ಸ್ಟಾಫ್ ಸಹ ಕಡಿಮೆ ಇದ್ದಾರೆ' ವಿಶಾಲ್ ದೂರುವಂತೆ ಹೇಳಿದ.

'ಹೂಂ, ನಮ್ಮ ಕಚೇರಿಯಲ್ಲೂ ಸ್ಟಾಫ್ ಕೊರತೆಯಿದೆ, ಇವತ್ತು ಎಲ್ಲಾ ಕಚೇರಿಗಳಲ್ಲೂ ಇದೇ ಪರಿಸ್ಥಿತಿ ಇದೆ', ನಾನು ಟಿಪ್ಪಣಿ ಮಾಡಿದೆ.

'ಓಹ್, ನಾವು ಯಾವುದೋ ಮಾತುಗಳಲ್ಲಿ ಸಿಲುಕಿದೆವು. ಇದು ಜಗತ್ತು, ಇದು ನಡೆಯುವುದೇ ಹೀಗೆ. ಚಹಾ ತರಿಸ್ಲಾ? ಕುಡೀತೀರ?'

'ಬೇಡ, ಥ್ಯಾಂಕ್ಸ್, ನಾನೀಗ ಅರ್ಜೆಂಟ್‌ನಲ್ಲಿದ್ದೇನೆ, ಮುಂದೆ ನೋಡೋಣ'.

'ಮುಂದೆ ಏಕೆ, ನಾಳೆಯೇ ಏಕಿಲ್ಲ?' ವಿಶಾಲ್ ಕೇಳಿದ.

'ನಾಳೆ? ನಾಳೆ ಏನಿದೆ?' ನನಗೆ ವಿಶಾಲನ ಮಾತು ಅರ್ಥವಾಗಲಿಲ್ಲ.

'ನಾಳೆ ರಜ ಇದೆ, ನಾಳೆಯ ಚಹಾಕ್ಕೆ ನಿಮ್ಮನ್ನು ಆಹ್ವಾನಿಸುತ್ತಿದ್ದೇನೆ'.

'ಓಹ್! ನೀವೆಲ್ಲಿದ್ದೀರ?' ಕೇಳಿದೆ.

'ಇಲ್ಲೇ ಸಿವಿಲ್ ಲೈನ್ಸ್‌ನ ಬಾಡಿಗೆ ಮನೆಯಲ್ಲಿದ್ದೇನೆ. ಆದ್ರೆ ಮನೇಲಿ ನನ್ನ ಹೊರತು ಬೇರೆ ಯಾರೂ ಇಲ್ಲ. ಅದಕ್ಕೇ ನಿಮ್ಮನ್ನು ಮನೆಗೆ ಕರೆಯದೆ ರೆಸ್ಟೋರೆಂಟಿಗೆ ಆಹ್ವಾನಿಸುತ್ತಿದ್ದೇನೆ. ಮೂರು ಗಂಟೆಗೆ ನಿಮ್ಮನ್ನು ಕರೆದುಕೊಂಡು ಹೋಗಲು ಬರ್ತೀನಿ. ನಿಮ್ಮ ಮನೆ ಎಲ್ಲಿದೆ?' ವಿಶಾಲ್ ಕೇಳಿದ.

'ಬೇಡ, ಬರುವ ಅಗತ್ಯವಿಲ್ಲ. ನಾನೇ ಬರ್ತೀನಿ'.

'ಸರಿ, ನಾಳೆ ಮೂರು ಗಂಟೆಗೆ ಫೆಸ್ಟಿವ್ ರೆಸ್ಟೋರೆಂಟಿನಲ್ಲಿ ಭೇಟಿಯಾಗೋಣ'.

